Sri G. DUGGAPPA.—Did not Government take a decision preyiously to release some Amruth Mahal Kaval lands including this piece of land ?

Sri H. V. KOUJALGI.—So far as these lands are concerned, the Government had not taken any such decision.

Institute of Speech and Hearing, Mysore

163. Sri K. M. THAMMIAH (Kadur).—

Will the Minister for Social Welfare be pleased to state :—

(*a*) whether there is an Institute called the Indian Institute of Speech and Hearing located at Mysore City ;

(*b*) whether the State Government have given any assistance to the said institute ;

(*c*) if not, whether they intend to give any assistance to the institute, and provide necessary hostel facilities to the immates of the institute since such facilities are not available there ?

Sri V. L. PATIL (Minister for Social Welfare).—

(*a*) Yes. The correct name of the institution is "All India Institute of Speech and Hearing, Mysore."

(*b*) The following assistance has been given by the State Government to this Institute :—

1. It is agreed to upgrade the Associated Specialist Departments at the Mysore Medical College and permitting the Institute to utilise the services of some specialists on a moderate honorarium ;
2. Twenty beds have been sanctioned in the K.R. Hospital, Mysore, for the use of the cases from the Institute which require hospitalisation ;
3. The E. N. T. Department of Mysore Medical College has been upgraded and provisions are being made for microsurgery of the ear to attend to the referrals from this Institute.
4. Facilities have also been provided for establishing a Speech and Hearing Clinic at the K.R. Hospital Out-patients Department with the equipment and staff belonging to the Institute and the Clinic is functioning since February 1969.

(*c*) Does not arise in view of reply to clause (*b*) above.

ಶ್ರೀ ಕೆ. ಎಂ. ತಮ್ಮಯ್ಯ.—ಈ ಸಂಸ್ಥೆ ಮಹಾರಾಜಾಕಾಲೇಜಿನ ಡೈಮಂಡ್ ಜೂಬಲಿ ಕಟ್ಟಡದಲ್ಲಿ ಇತ್ತು. ಆ ಕಟ್ಟಡ ನಾಲ್ಕೆ ಇರುವುದರಿಂದ ಬೇರೆ ಕಟ್ಟಡ ಕಟ್ಟಿಕೊಡುವುದಕ್ಕೆ ಸರಕಾರ ಏನಾದರೂ ಪ್ರಯತ್ನ ಮಾಡುತ್ತದೆಯೇ ?

†ಶ್ರೀ ವಿ. ಎಲ್. ಪಾಟೀಲ್.—ಇದು ಕೇಂದ್ರ ಸರಕಾರದ ಸಂಸ್ಥೆಯಾದುದರಿಂದ ಈ ಬಗ್ಗೆ ಸರಕಾರ ಏನೂ ಮಾಡಲಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಈ ಸಂಸ್ಥೆಗೆ ನೆರೆಹೊರೆಯ ರಾಜ್ಯಗಳಿಂದ ಐದು ಹತ್ತು ವರ್ಷಗಳ ವರಗಿನ ಮಕ್ಕಳು ಬರುತ್ತಾರೆ. ಅವರಿಗೆ ವಸತಿ ಸೌಕರ್ಯ ಇಲ್ಲದೆ ಇರುವುದರಿಂದ ಬಡ ಜನರ ಮಕ್ಕಳಿಗೆ ಬಹಳ ಕಷ್ಟವಾಗುತ್ತಾ ಇದೆ. ಆದುದರಿಂದ ಅವರಿಗೆ ಹಾಸ್ಟಲ್ ಕಟ್ಟಿಸಿ ಉಚಿತ ವಸತಿ ಸೌಕರ್ಯ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ವಿ. ಎಲ್. ಪಾಟೀಲ್.—ಆ ಸೂಚನೆ ಪರಿಶೀಲನೆ ಮಾಡಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರಕಾರದವರು ಫೈನಾನ್ಷಿಯಲ್ ಅಸಿಸ್ಟೆನ್ಸ್ ಮತ್ತು ಮ್ಯಾನೇಜ್‌ಮೆಂಟ್ ಪಾರ್ಟಿಸಿಪೇಷನ್ನಿನಲ್ಲಿ ಏನಾದರೂ ಸಹಾಯ ಮಾಡುತ್ತಿದ್ದಾರೆಯೇ?

ಶ್ರೀ ವಿ. ಎಲ್. ಪಾಟೀಲ್.—ಫೈನಾನ್ಷಿಯಲ್ ಅಸಿಸ್ಟೆನ್ಸ್ ಸರಕಾರದವರು ಏನೂ ಕೊಡುತ್ತಿಲ್ಲ. ಇದು ಪೂರ್ತಿಯಾಗಿ ಕೇಂದ್ರಸರಕಾರದ ಸಹಾಯದಿಂದ ನಡೆಯುತ್ತಾ ಇದೆ.

ಶ್ರೀ ಎನ್.ಎ. ಚೆನ್ನೇಗೌಡ.—ಈ ಸಂಸ್ಥೆಗಳಲ್ಲಿ ಎಷ್ಟು ಬಾಲಕರು ಚಿಕಿತ್ಸೆ ಪಡೆಯುತ್ತಿದ್ದಾರೆ? ಇಲ್ಲಿ ಮೈಸೂರು ರಾಜ್ಯದ ಮಕ್ಕಳಿಗೆ ಗಮನ ಕೊಡದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ವಿ. ಎಲ್. ಪಾಟೀಲ್.—ಅದು ಸರಕಾರದ ಗಮನಕ್ಕೆ ಬಂದಿಲ್ಲ. ಅದು ಕೇಂದ್ರಸರಕಾರದ ಯೋಜನೆ ಆದುದರಿಂದ ಅದನ್ನು ಕೇಂದ್ರಸರಕಾರದವರೇ ನಡೆಸುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಈ ಸಂಸ್ಥೆ ಕೇಂದ್ರಸರಕಾರದ್ದು ಆದರೂ ಪೋಸ್ಟ್‌ಗ್ರಾಜುಯೇಟ್ ಕೋರ್ಸ್ ಇರುವುದರಿಂದ ನಮ್ಮ ಸಂಸ್ಥಾನದ ವಿದ್ಯಾರ್ಥಿಗಳಿಗೆ ಎರಡು ಮೂರು ಸೀಟುಗಳನ್ನಾದರೂ ಕೊಡಿಸಿ ಕೊಡುವುದಕ್ಕೆ ಸಾಧ್ಯವಿಲ್ಲವೇ? ಆವರು ಒಪ್ಪಿದ್ದರೆ ಯಾರನ್ನಾದರೂ ಇದೇ ರೀತಿ ಕಳುಹಿಸಿದ್ದೀರಾ?

ಶ್ರೀ ವಿ. ಎಲ್. ಪಾಟೀಲ್.—ಈ ಸೂಚನೆಯನ್ನು ಗಮನದಲ್ಲಿಟ್ಟು ಕೇಂದ್ರ ಸರಕಾರದವರ ಜೊತೆ ಪ್ರಯತ್ನ ಮಾಡಬಹುದು.

ಶ್ರೀ ಕೆ. ಎಸ್. ನಾಗರತ್ನಮ್ಮ.—ನಾನು ಮೊದಲು ಒಂದು ಸಾರಿ ಪ್ರಶ್ನೆ ಕಳುಹಿಸಿದಾಗ ಅದು ಕೇಂದ್ರಸರಕಾರದ ಸಂಸ್ಥೆ ಉತ್ತರ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದಿರಿ. ಈಗ ತಮ್ಮಯ್ಯನವರಿಗೆ ಉತ್ತರ ಕೊಟ್ಟಿದ್ದೀರಿ. ಅದರ ವಿಚಾರದಲ್ಲಿ ಕೇಳಬೇಕಾದದ್ದು ಬೇಕಾದಷ್ಟು ಇದೆ.

Mr. SPEAKER.—I cannot allow the Hon. Member a second time to put a supplementary. I am following this procedure in order that all members are accommodated in putting supplementaries and also all questions are reached during the question hour.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಸಮಾಜ ಕಲ್ಯಾಣ ಮಂತ್ರಿಗಳು ಸಂಬಂಧಪಟ್ಟ ಖರ್ಚುವೆಚ್ಚಗಳನ್ನು ಕೇಂದ್ರಸರಕಾರದವರು ವಹಿಸಿಕೊಳ್ಳುತ್ತಾರೆ ಎಂದು ಹೇಳಿದರು. ಈಗ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮುಗಳನ್ನು ರದ್ದು ಮಾಡಿದ್ದಾರೆ. ಇದನ್ನು ಯಾರು ವಹಿಸಿಕೊಳ್ಳುತ್ತಾರೆ?

ಶ್ರೀ ವಿ. ಎಲ್. ಪಾಟೀಲ್.—ಈ ಸಂಸ್ಥೆಗಳನ್ನು ಪೂರ್ತಿಯಾಗಿ ಕೇಂದ್ರ ಸರಕಾರದವರು ನಡೆಸುತ್ತಿದ್ದಾರೆ. ಎಲ್ಲಾ ಖರ್ಚುವೆಚ್ಚಗಳನ್ನು ಅವರೇ ನೋಡಿಕೊಳ್ಳುತ್ತಿದ್ದಾರೆ. ಅಲ್ಲಿರುವ ಅಸ್ಪತ್ರೆಗೆ ಕೆಲವು ಬೆಡ್ಸ್ ಮತ್ತು ಎಕ್ವಿಪ್‌ಮೆಂಟ್ಸ್ ಕೊಡುತ್ತಿದ್ದಾರೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ಸಂಸ್ಥೆಯಲ್ಲಿ ಟ್ರೈನಿಂಗ್ ಕಾಲೇಜು ನಡೆಯುತ್ತಾ ಇದೆ. ಅಲ್ಲಿ ಟ್ರೈನಿಂಗ್ ಆದವರಿಗೆ ಎಲ್ಲಾ ಆಸ್ಪತ್ರೆಗಳಲ್ಲಿ ಕೆಲಸ ಕೊಡಬೇಕೆಂದು ಕೇಂದ್ರಸರಕಾರದ ಆದೇಶ ಬಂದಿದ್ದರೂ ಅವರಿಗೆ ಅಲ್ಲಿ ಕೆಲಸ ಇಲ್ಲದೆ ಇರುವುದರಿಂದ ಗ್ರಾಮಾಂತರದಲ್ಲಿ ಅವರನ್ನು ನೇಮಿಸಿಕೊಳ್ಳಲು ಸರಕಾರ ಪ್ರಯತ್ನ ಮಾಡುತ್ತದೆಯೇ?

ಶ್ರೀ ವಿ. ಎಲ್. ಪಾಟೀಲ್.—ಈ ತರಹ ಸರ್ಕಾರಕ್ಕೆ ತಿಳಿಸಿದ್ದರೆ ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತಾರೆ.